ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಸುಧಾಸುವಚನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -31 ಮೊಕ್ಕಾಂ: ಲಾಸ್ ಏಂಜಲೀಸ್

ಅಸ್ಮೋದ್ಭವಾದಿದಂ ವಿಶೇಷಣದ ಎಲ್ಲಾ ಬಿಡಿ ಭಾಗಗಳನ್ನೂ ಬಿಡಿಸಿ ಬಿಡಿಸಿ ನೋಡಿ ಪುನಃ ಹಾಗೆನೇ ಜೋಡಿಸಿದ್ದಾಯ್ತು.

ಇದೀಗ ನಂತರದ್ದು ಅಶೇಷ ವಿಶೇಷತೋಪಿ ವಂದ್ಯಂ ಎಂಬ ವಿಶೇಷಣ. ಅಶೇಷ ವಿಶೇಷಗಳನ್ನು ವಿಶ್ಲೇಷಣ ಮಾಡಿದಷ್ಟು ಅದು ಸಶೇಷವೇ ಆಗುತ್ತ ಹೋಗುತ್ತದೆ. ಶೇಷನ ಸಹಸ್ರ ಫಣಗಳಂತೆ ಈ ಅಶೇಷ ವಿಶೇಷಣ ಬಿಡಿಸಿಕೊಳ್ಳುತ್ತದೆ. ಪಸರಿಸಲ್ಪಡುತ್ತದೆ ಸಹಸ್ರಾರ್ಥವನ್ನು ಅರ್ಪಿಸುತ್ತದೆ ಎಂಬುದನ್ನೂ ಈ ಹಿಂದೆಯೇ ಹೇಳಿದ್ದುಂಟು.

ಒಂದು ರೀತಿಯಲ್ಲಿ ಗಮನಿಸಿದಾಗ ಇದು ವಂದ್ಯಂ ಎಂಬ ವಿಶೇಷಣಕ್ಕೆ ಮಾತ್ರ ಸಂಬಂಧ ಪಟ್ಟದ್ದಲ್ಲ. ಈ ವಿಶೇಷಣವನ್ನು ಪ್ರತಿಯೊಂದು ವಿಶೇಷಣಕ್ಕೂ ಹಚ್ಚಿದರೆ, ಅನ್ವಯಿಸಿದರೆ ಆ ವಿಶೇಷಣದ ಅರ್ಥ ವಿಶಾಲವಾಗುತ್ತದೆ. ಆಳವಾಗುತ್ತದೆ. ಬಹುಗುಣವಾಗುತ್ತದೆ. ಅಶೇಷ ವಿಶೇಷತಃ ನಿಖಿಲಪೂರ್ಣ ಗುಣೈಕದೇಹಂ, ಅಶೇಷ ವಿಶೇಷತಃ ನಿರ್ದೋಷಂ ಎಂಬುದಾಗಿ ಸರ್ವತ್ರ ವಿಶೇಷಣಾರ್ಥಗಳನ್ನು ಅದು ಅನೇಕ ಪಟ್ಟು ಎತ್ತಿ ಕೊಡುತ್ತವೆ ಎಂಬುದರ ಸೂಚನೆ "ಅಸ್ಮೋದ್ಭವಾದಿದಂ ಇತ್ಯನೇನಾಪಿ ಸಂಬಧ್ಯತೇ ಎಂಬ ವಾಕ್ಯದಿಂದ ಮತ್ತು ಅಪಿ ಪದದಿಂದಲೂ ಕೊಡುತ್ತಿದ್ದಾರೆ.

ಅಲ್ಲ ನಿಮ್ಮ ಅರ್ಥದಂತೆ ನಿಖಿಲ ಪೂರ್ಣಗುಣೈಕದೇಹಂ ಇತ್ಯಾದಿನಾಪಿ ಸಂಬಂಧ್ಯತೇ ಎಂಬುದಾಗಿ ಜಯಾರ್ಯರು ಹೇಳಬೇಕಾಗಿತ್ತು. ಅದು ಬಿಟ್ಟು ಅಸ್ಮೋದ್ಭವಾದಿದಂ ಇತ್ಯನೇನಾಪಿ ಎಂದು ಹೇಳಿದ್ದು ಯಾಕೆ ಎಂ

# ಘುಸಣೀಕರಣ?

ಸಹಕಾರ ನೀಡಲು ಸಾಕಾರಗೊಂಡ ಸರಕಾರಗಳು ಸರ್ವಾಕಾರಗಳಾಗುತ್ತಿವೆಯೇ? ಸಾಹುಕಾರಗಳಾಗುತ್ತಿವೆಯೇ? ಸಮಾಜ ವ್ಯವಸ್ಥೆಯ ಸಾವು ಕಾರಣಗಳಾಗುತ್ತಿವೆಯೇ? ಗುರಿಕಾರಗಳಾಗುತ್ತಿವೆಯೇ? ಬುಟ್ಟಿಯಲ್ಲಿಟ್ಟು ತರಕಾರಿ ಮಾರುವ ಉಸಾಬರಿಯೂ ಸರಕಾರಗಳಿಗೆ ಬೇಕೇ? ಈ ರಕಾರದ ರಾಜಕಾರಣಿಗಳಿಂದ ಸಹಿತವಾದ ಸರಕಾರಗಳು ಸ್ವಾರ್ಥದ ಸರಮಾಲೆಗಾಗಿ ಶಾಲೆಯ ಕಂಪೌಂಡಿನೊಳಗೂ ಡೇರೆ ಹಾಕುತ್ತಿವೆಯಂತೆ. ಇನ್ನು ಮೇಲೆ ಶಾಲಾಭಿವೃದ್ಧಿ ಮಂಡಳಿಗಳಿಗೂ ಪದಾಧಿಕಾರಿಗಳಾಗಿ ರಾಜಕಾರಣಿಗಳನ್ನೇ, ರಾಜಕೀಯ ಪುಡಾರಿಗಳನ್ನೇ ಖಡ್ಡಾಯವಾಗಿ ನೇಮಕ ಮಾಡಬೇಕಂತೆ. ಹಾಗಂತ ಕಾನೂನು ತಯಾರಾಗುತ್ತಿವೆಯಂತೆ ಎಂದು ಗೊಣಗುತ್ತಾ ಸಮಾಜ ಶಾಸ್ತ್ರದ ಟೀಚರ್ ಪಾಠ ಮುಗಿಸಿ ಅಧ್ಯಾಪಕರ ಕೊಠಡಿಗೆ ಪದಾರ್ಪಣ ಮಾಡುತ್ತಾ ಹಣೆಬೆವರನ್ನು ಒರೆಸಿಕೊಳ್ಳುತ್ತಾ ಸಶಬ್ದವಾಗಿ ಟೇಬಲಿಗೆ ಪಠ್ಯಪುಸ್ತಕವನ್ನು ಎಸೆದು ಬಿಟ್ಟರು.

ತಕ್ಷಣ ಅಲ್ಲಿ ಕೂತಿದ್ದ ಪೊಲಿಟಿಕಲ್ ಸಾಯನ್ಸ್ ಟೀಚರಿಗೆ ಸಮಾಜ ಶಾಸ್ತ್ರ ಮೇಸ್ತ್ರ ದುಂಡಾವರ್ತನೆ ಹಿಡಿಸದೆ ಹೇಳಿದರು. ಅಲ್ಲ ನೀವು ಶಾಲಾಭಿವೃದ್ಧಿ ಮಂಡಳಿಗೆ ರಾಜಕಾರಣಿಗಳು ಪದಾಧಿಕಾರಿಗಳಾಗಬಾರದೆಂದು ಪ್ರತಿಭಟಿಸಿದರೆ ಮತ್ತೆ ಸರಕಾರ ಹೇಗೆ ನಡೆಸಬೇಕೆಂದು ನೀವೇ ಹೇಳಬೇಕು. ಈ ಕಾನೂನು ಮಾಡದೇ ಹೋದರೆ ಸರಕಾರ ಬಿದ್ದು ಹೋಗುತ್ತದೆ ಗೊತ್ತಾ? ಇಷ್ಟೆಲ್ಲಾ ಶಾಸಕ ಅನುಶಾಸಕರಿಗೆ ಮತ್ತು ಅವರ ಅನುಯಾಯಿಗಳಿಗೆ ಮಂತ್ರಿಪಟ್ಟ ನಿಗಮಾಗಮಗಳ ಅಧ್ಯಕ್ಷಸ್ಥಾನ ಎಲ್ಲಿಂದ ತರುವುದು? ಅವರೆಲ್ಲರನ್ನೂ ಸಂತೋಷದಲ್ಲಿಡದಿದ್ದರೆ ಅಕಾಮಡೇಷನ್ ಮಾಡದಿದ್ದರೆ ಈ ಸರಕಾರವನ್ನು ಚಾಲು ಮಾಡಲು ಬರುತ್ತಾ?

ಶಾಲಾಭಿವೃದ್ಧಿ ಮಂಡಳಿಗಳನ್ನೆಲ್ಲಾ ಭರ್ತಿ ಮಾಡಿದರೂ ಸಾಕಾಗದೆ ಇದೀಗ ದೇವಾಲಯ ಭೂತಾಲಯಗಳಿಗೂ ರಾಜಕಾರಣಿಗಳನ್ನೇ ಪದಾಧಿಕಾರಿಗಳಾಗಿಸ ಬೇಕೆಂದು ಕಾನೂನು ಮಾಡಬೇಕಾಗುತ್ತೆ ಗೊತ್ತಾ? ಮತ್ತೆ ಸರಕಾರ ನಡೆಸುವುದೆಂದರೆ ಅದು ಕುಶಾಲಾ? ಅದೊಂದು ಮಹಾಸಂತರ್ಪಣೆ ಗೊತ್ತಾ? ಬರೇ ಸಮಾಜ ಸಮಾಜ ಎಂದು ಮಜಾ ಮಾಡುವ ನಿಮಗೇನು ಗೊತ್ತು ರೀ? ಎಂದು ಪೊಲಿಟಿಕಲ್ ಸಾಯನ್ಸ್ ಟೀಚರ್ ಸ್ವಲ್ಪ ನಾನ್‌ಪೊಲೈಟಾಗಿಯೇ ಹೇಳಿದರು.

ಅಷ್ಟೊತ್ತಿಗೆ ಅಲ್ಲೇ ಪವಡಿಸುತ್ತಿದ್ದ ಎಕನಾಮಿಕ್ಸ್ ಟೀಚರ್ ತಮ್ಮ ಕಮೆಂಟನ್ನೂ ಕೆಮ್ಮುತ್ತಾ, ನೋಡಿ ರಾಜಕಾರಣಿಗಳೇ ಶಾಲಾಭಿವೃದ್ಧಿ ಮಂಡಳಿಯ ಪದಾಧಿಕಾರಿಗಳಾಗಿದ್ದರೆ ನಮ್ಮಗಳ ಸಂಬಳ ಎಲ್ಲಾ ಯಾರ ಕಾಲಿಗೂ ಬೀಳದೆ ಸಕಾಲಕ್ಕೆ ಮಂಜೂರಾಗುತ್ತೆ ರೀ. ನಾವು ಅವರುಗಳನ್ನು ಮಾತ್ರ ನೋಡಿಕೊಂಡರೆ ಸಾಕು ರೀ. ಈ ದಿತಶನಿನಲ್ಲಿ ಎಕನಾಮಿಕ್ಸೂ ಅಡಕವಾಗಿದೆ ರೀ ಎಂದು ಉದ್ಗರಿಸಿದಾಗ.

ಸಕಾಲದಲ್ಲಿ ಉಪಸ್ಥಿತರಿದ್ದ ಲಿಟರೇಚರ್ ಟೀಚರ್ ಮಧ್ಯೆ ಉಗ್ಗರಣೆ ಹಾಕುತ್ತಾ ಕಾಮಿಕ್ಸೇ ಮಾಡದ ಎಕನಾಮಿಕ್ಸ್ ಟೀಚರ್ ಅದೇಕೋ ಎಷ್ಟು ಚೆನ್ನಾಗಿ ಎಕನಾಮಿಕ್ಸ್ ಮಿಕ್ಸ್ ಮಾಡಿ ಕ್ಯಾಲ್ಕುಲೇಟ್ ಮಾಡಿ ಮಾತಾಡಿದ್ದಾರೆ ನೋಡಿ ಎಂದು ತಮ್ಮ ಶಹಭಾಸ್‌ಗಿರಿಯನ್ನೂ ನೀಡಿದರು.